# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:** : 571

**ಮಾನ್ಯ ಸದಸ್ಯರ ಹೆಸರು** : **ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)**

**ಉತ್ತರಿಸುವ ಸಚಿವರು** : **ಮಾನ್ಯ ಮುಖ್ಯಮಂತ್ರಿಗಳು**

**ಉತ್ತರಿಸಬೇಕಾದ ದಿನಾಂಕ** : 13.12.2018

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರಿ ನೌಕರರ ಸಂಖ್ಯೆ ಎಷ್ಟು; ಇದರಲ್ಲಿ ಎನ್.ಪಿ.ಎಸ್. ಪಿಂಚಣಿ ವ್ಯವಸ್ಥೆಗೆ ಒಳಪಟ್ಟಿರುವ ನೌಕರರ ಸಂಖ್ಯೆ ಎಷ್ಟು; | ಹೆಚ್.ಆರ್.ಎಂ.ಎಸ್. ನ ಮಾಹಿತಿ ಪ್ರಕಾರ:<br><br>ರಾಜ್ಯ ಸರ್ಕಾರಿ ನೌಕರರ ಸಂಖ್ಯೆ:5,31,124.<br><br>ಇದರಲ್ಲಿ ಎನ್.ಪಿ.ಎಸ್. ನೌಕರರ ಸಂಖ್ಯೆ:2,06,862. |
| (ಆ) | ಇತ್ತೀಚೆಗೆ ಎನ್.ಪಿ.ಎಸ್. ನೌಕರರು ಎನ್.ಪಿ.ಎಸ್. ಯೋಜನೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| (ಇ) | ಕೆಲವು ರಾಜ್ಯಗಳಲ್ಲಿ ಎನ್.ಪಿ.ಎಸ್. ಬದಲಿಗೆ ಹಳೆಯ ನಿಶ್ಚಿತ ಪಿಂಚಣಿ ಯೋಜನೆಯನ್ನು ಮುಂದುವರಿಸಿರುವುದು (ಪಶ್ಚಿಮ ಬಂಗಾಳ) ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಳೆಯ ಪಿಂಚಣಿ ಯೋಜನೆಯನ್ನು ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಮಾತ್ರ ಮುಂದುವರೆಸಲಾಗಿದೆ. ಇತರೆ ಎಲ್ಲಾ ರಾಜ್ಯಗಳು ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಂಡಿರುತ್ತವೆ. |
| (ಈ) | ರಾಜ್ಯದಲ್ಲಿಯೂ ಸಹ ಎನ್.ಪಿ.ಎಸ್. ರದ್ದುಗೊಳಿಸಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳೇನು? | ಕೇಂದ್ರ ಸರ್ಕಾರವು ದಿನಾಂಕ:01-01-2004 ರಿಂದ ಜಾರಿಗೆ ಬರುವಂತೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದ್ದು, ಅದರಂತೆ ಇತರ ರಾಜ್ಯಗಳು ಈ ಯೋಜನೆಯನ್ನು ಅಳವಡಿಸಿಕೊಂಡ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯವು ಸಹ ದಿನಾಂಕ:01-4-2006 ರಿಂದ ಈ ಯೋಜನೆಯನ್ನು ಜಾರಿಗೊಳಿಸಿರುತ್ತದೆ.<br><br>ಸದರಿ ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ ಮಾರ್ಪಾಡು ಮಾಡಲು ಸರ್ಕಾರವು ದಿನಾಂಕ:11.12.2018ರಂದು ಆಇ 107 ಪಿಇಎನ್ 2018ರ ಆದೇಶದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ.<br><br>ಸದರಿ ಅಧಿಕಾರಿಗಳ ಸಮಿತಿಯು ನೀಡುವ ವರದಿಯನ್ನು ಸರ್ಕಾರವು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. |

**ಸಂಖ್ಯೆ:ಆಇ(ವಿ) 97 ಪಿಇಎನ್ 2018**

**(ಹೆಚ್.ಡಿ.ಕುಮಾರಸ್ವಾಮಿ)**
ಮುಖ್ಯಮಂತ್ರಿ